**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 03.12.2025**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಜೆ ಹೆಚ್ ವಕೀಲರಿಂದ**

ಶಬಾನ ಹಸ್ಮಿ ಎಂಬುವವರು ನಮ್ಮ ಗ್ರಾಹಕರುರಾಗಿರುತ್ತಾರೆ. ಸದರಿಯವರು ನಮ್ಮ ಬ್ಯಾಂಕನಲ್ಲಿ ಲೋನ್ ಪಡೆದಿರುತ್ತಾರೆ ಎಂದರೆ ಸರಿ . ಸದರಿಯವರು ಪಡೆದುಕೊಂಡ ಲೋನ್ ಗೆ ಗ್ಯಾರಂಟರಾಗಿ ಆರೋಪಿಯು ಸಹಿ ಮಾಡಿರುತ್ತಾರೆ ಎಂದರೆ ಸರಿ . ಆದಾದ ನಂತರ ಆರೋಪಿಯು ನಮ್ಮ ಬಳಿ ಖಾತೆ ತೆರೆದಿರುತ್ತಾರೆ ಎಂದರೆ ಸರಿ . ಆರೋಪಿಯು ಲೋನ್ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಶಬಾನ ಹಸ್ಮಿ ರವರಿಗೆ ಹಣ ಬೇಕಿದ್ದರಿಂದ ಆರೋಪಿಯು ಲೋನ್ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಶಬಾನ ಹಸ್ಮಿರವರ ಲೋನ್ ಗೆ ಸಂಬಂದಪಟ್ಟಂತೆ ಆರೋಪಿ ಕಡೆಯಿಂದ ಯಾವುದೆ ಚೆಕ್ ನ್ನು ಪಡೆದಿರುವುದಿಲ್ಲ. ನಮ್ಮ ಬಳಿ ಇರುವ ದಾಖಲಾತಿಯ ಪ್ರಕಾರ ಆರೋಪಿಯು ಎಸ್ ಎಸ್ ಎಲ್ ಸಿ ರವರೆಗೆ ವ್ಯಾಸಂಗ ಮಾಡಿರುತ್ತಾರೆ. ಆರೋಪಿ ಕಡೆಯಿಂದ ಲೋನನ್ನು ಮಂಜೂರು ಮಾಡಬೇಕಾದರೆ ಲೋನ್ ಅರ್ಜಿ , ಕೆ ವೈ ಸಿ ದಾಖಲಾತಿ , ಅಗ್ರಿಮೆಂಟ, ಪ್ರಮಿಸರಿ ನೋಟ್ ಪಡೆದುಕೊಂಡಿರುತ್ತೇವೆ. ಸದರಿ ದಾಖಲಾತಿಗಳನ್ನು ಬೇಕಾದಲ್ಲಿ ಹಾಜರುಪಡಿಸುತ್ತೇನೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸದರೆ ಆರೋಪಿ ಸಹಿ ಮಾಡಿದ್ದಾರೋ ಇಲ್ಲಮೋ ಎಂದು ತಿಳಿದು ಬರುತ್ತದೆ ಎಂದರೆ ಸರಿ . ಆರೋಪಿ , ಶಬಾನ ಹಸ್ಮಿ ಮತ್ತು ನಾನು ಸ್ನೇಹಿತರು ಎಂದರೆ ಸರಿಯಲ್ಲ. ಶಬಾನ ಹಸ್ಮಿ ರವರ ಸಾಲಕ್ಕೆ ಆರೋಪಿ ಕಡೆಯಿಂದ ಒಂದು ಚೆಕ್ ನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿ ಚೆಕ್ ನ್ನು ಪಡೆದುಕೊಂಡು ಆರೋಪಿಯ ಹೆಸರಿನಲ್ಲಿ ಲೋನ್ ನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂರದೆ ಸರಿಯಲ್ಲ. 2022 ಸಾಲಿನಿಂದ ಆರೋಪಿಗೆ ನೋಟಿಸು ಕಳುಹಿಸತ್ತಲೇ ಇದ್ದೆವೆ.

ನನ್ನ ನೆನಪಿಗೆ ಒಟ್ಟು 5-6 ಬಾರಿ ಆರೋಪಿಗೆ ನೋಟಿಸು ನೀಡಿರುತ್ತೇವೆ. ಸದರಿ ಪ್ರಕರಣ ದಾಖಲಾದ ಮೇಲೆ ಆರೋಪಿಗೆ ನೋಟಸು ಮಾಡಿರುವುದಿಲ್ಲ. ಸಾಕ್ಷಿಗೆ ಈ ಹಂತದಲ್ಲಿ ಎರಡು ದಾಖಲಾತಿಗಳನ್ನು ತೋರಿಸಲಾಗಿ ಅದು ಆರೋಪಿಗೆ ಪ್ರಕರಣ ದಾಖಲಾದ ಮೇಲೆ ಕಳುಹಿಸಿದ ಒಂದು ನೋಟಿಸುಗಳು ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ನೋಟಿಸಗಳನ್ನು ಶ್ಯುರಿಟಿದಾರರಿಗೆ ಕಳುಹಿಸಿ ಅದರ ಒಂದು ಪ್ರತಿಯನ್ನು ಆರೋಪಿಗೆ ಕೊಟ್ಟಿರುತ್ತೇವೆ ಎಂದು ನುಡಿದರು. ಸಾಕ್ಷಿಯು ಸದರಿ ನೋಟಿಸಗಳನ್ನು ಒಪ್ಪಿದ ಮೇರೆಗೆ ಅವುಗಳನ್ನು ನಿಡಿ 1 ಮತ್ತು ನಿಡಿ 2 ಎಂದು ಗುರುತಿಸಲಾಯಿತು. ಲೋನ್ ಕೊಡುವ ಸಮಯದಲ್ಲಿ ಆರೋಪಿ ಕಡೆಯಿಂದ ಯಾವುದೆ ಚೆಕ್‌ನ್ನು ಪಡೆದಿರುವುದಿಲ್ಲ. ಆರೋಪಿಗೆ ಈ ದಾಖಲಾತಿಗಳಿಗೂ ಯಾವುದೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಸೃಷ್ಟಿಸಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ